# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ)

ನಿಯಮಗಳು, 1984 ರ (9) ನೆಯ ನಿಯಮದ ಮೇರೆಗಿನ ಕ್ರಯಪತ್ರ

## ಹರಾಜು ಮಾರಾಟ ಕ್ರಯಪತ್ರ (ಖಾಲಿ ನಿವೇಶನ : ಕಟ್ಟಡ)

ಸನ್ ________________ ದ ಇಸವಿ ________________ ತಿಂಗಳ ________________ ದಿನಾಂಕದಂದು ಮೊದಲನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನುಮುಂದೆ ಮಾರಾಟಗಾರರು (ಮಾರಾಟಗಾರ ಎಂದರೆ ಅಧಿಕಾರದಲ್ಲಿರುವ ಅವರ ಉತ್ತರಾಧಿಕಾರಿಗಳು ಎಂದರ್ಥ ಮತ್ತು ಅವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇದನ್ನು ಪ್ರತಿನಿಧಿಸುವ ಅದರ ಉಪಕಾರ್ಯದರ್ಶಿಯವರು ಎರಡನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಖರೀದಿದಾರರು (ಖರೀದಿದಾರ ಎಂದರೆ ಆತನ : ಆಕೆಯ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು ಮತ್ತು ಹಸ್ತಾಂತರಣಕಾರರು ಎಂದರ್ಥ ಮತ್ತು ಅವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ________________________________ ________________ ಎಂಬಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ________________________________ ________________ ಎಂಬುವವರ ಮಗನಾದ : ಮಗಳಾದ : ಹೆಂಡತಿಯಾದ ________________ ವರ್ಷ ವಯಸ್ಸಿನ ಶ್ರೀ/ಶ್ರೀಮತಿ ________________________________ ಎಂಬುವವರಿಗೆ ಬೆಂಗಳೂರಿನಲ್ಲಿ ಬರೆದುಕೊಟ್ಟ ಕ್ರಯಪತ್ರದ ಕ್ರಮವೇನೆಂದರೆ :-

________________________________ ರಂದು ಮಾರಾಟಗಾರರು ನಡೆಸಿದ ಹರಾಜಿನಲ್ಲಿ ಖರೀದಿದಾರರು ಷೆಡ್ಯೂಲ್ ಸ್ವತ್ತನ್ನು ________________ ರೂಪಾಯಿಗಳಿಗೆ (________________________________ ________ ________________ ರೂಪಾಯಿಗಳು) ಖರೀದಿಸಿದ್ದಾರೆ. ಮತ್ತು ಸದರಿ ಹರಾಜು ಮಾರಾಟವನ್ನು ಸ್ಥಿರೀಕರಿಸಿದ್ದಾರೆ.

ಮಾರಾಟಗಾರರು ಬೆಂಗಳೂರಿನ ________________________________ ಬಡಾವಣೆಯಲ್ಲಿ ರಚಿಸಿರುವ ಮತ್ತು ಇರುವ ನಿವೇಶನಗಳ ಪರಿಪೂರ್ಣ ಸ್ವಾಧೀನತೆಯನ್ನು ಹೊಂದಿದ್ದಾರೆ ಅಥವಾ ಸದರಿ ಸ್ವತ್ತಿನಲ್ಲಿ ತಾವು ಹೊಂದಿರುವ ಅಧಿಕಾರ, ಹಕ್ಕು ಮತ್ತು ಹಿತಾಸಕ್ತಿಗೆ ಪರಿಪೂರ್ಣ ಹಕ್ಕುಳ್ಳವರಾಗಿದ್ದಾರೆ.

ಮಾರಾಟಗಾರರು ಮತ್ತು ಖರೀದಿದಾರರ ನಡುವೆ ________________________ ರಂದು ಮಾಡಿಕೊಳ್ಳಲಾದ ಒಪ್ಪಂದದ ಪ್ರಕಾರ ಹರಾಜಿನಲ್ಲಿ ಖರೀದಿಸಿದ ಖರೀದಿದಾರರನ್ನು ಕೆಲವು ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಡಿಸಲಾಗಿದೆ ಮತ್ತು ಸದರಿ ಒಪ್ಪಂದ ಪತ್ರದ ಆ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಪೂರೈಸಿದ ನಂತರ ಮತ್ತು ಖರೀದಿದಾರನು ಕ್ರಯದ ಹಣವಾದ ________________________ ರೂಪಾಯಿಗಳನ್ನು (________________________________ ________________________________ ರೂಪಾಯಿಗಳು) ಈಗಾಗಲೇ ಮಾರಾಟಗಾರರಿಗೆ ಸಂದಾಯ ಮಾಡಿರುವುದನ್ನು ಪರಿಗಣಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪಕಾರ್ಯದರ್ಶಿ ಹಾಗೂ ಮಾರಾಟಗಾರರು ಹಣ ಬಂದಿರುವ ಬಗ್ಗೆ ಈಗಾಗಲೇ ಸ್ವೀಕೃತಿ ನೀಡಿದ್ದಾರೆ.

ಖರೀದಿದಾರರು ಮತ್ತು ಮಾರಾಟಗಾರರ ನಡುವೆ ಆದ ಸದರಿ ಒಪ್ಪಂದ ಪತ್ರದ ಅನುಸಾರವಾಗಿ ಮಾರಾಟಗಾರರು ಸದರಿ ಸ್ವತ್ತಿನ ಮಾರಾಟ ಬೆಲೆಯಾದ ________________________ ರೂಪಾಯಿಗಳನ್ನು ಖರೀದಿದಾರರಿಗೆ ಪಾವತಿ ಮಾಡಿರುವುದನ್ನು ಪರಿಗಣಿಸಿ, ಇದರಡಿಯಲ್ಲಿ ಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಇಡೀ ಸ್ವತ್ತನ್ನು ಅದರ ಪರಿಪೂರ್ಣ ಮಾಲೀಕರಾಗಿ ಖರೀದಿದಾರರಿಗೆ ಈ ಮೂಲಕ ವಹಿಸಿಕೊಟ್ಟಿರುತ್ತಾರೆ. ಇನ್ನು ಮುಂದೆ ಖರೀದಿದಾರರು ಸದರಿ ಷೆಡ್ಯೂಲ್ ಸ್ವತ್ತನ್ನು ತಮ್ಮ ಸ್ವಾಧೀನದಲ್ಲಿ ಹೊಂದಿ, ಅದನ್ನು ತಮ್ಮ ಸ್ವಂತ ಮತ್ತು ಸಂಪೂರ್ಣ ಸ್ವತ್ತು ಎಂಬಂತೆ ಶಾಶ್ವತವಾಗಿ ಸುಖ ಸಂತೋಷದಿಂದ ಅನುಭವಿಸಿಕೊಂಡು ಬರತಕ್ಕದ್ದು. ಸದರಿ ಸ್ವತ್ತು ಎಲ್ಲಾ ಋಣಭಾರಗಳಿಂದ ಮುಕ್ತವಾದ ಅತಿಕ್ರಮಣಕಾರರನ್ನು ಕಾನೂನುಬದ್ಧವಾಗಿ ಹೊರಹಾಕಿ

ತೆರವುಗೊಳಿಸಿರುವ ನಿರುಪಾದಿಕವಾದ ಸ್ವತ್ತಾಗಿದೆ. ಸದರಿ ಸ್ವತ್ತಿನ ಮೇಲೆ ಯಾವುದೇ ತೆರಿಗೆಗಳು ಬಾಕಿ ಇಲ್ಲ. ಯಾವುದೇ ರೀತಿಯ ಇತರ ಬಾಕಿಗಳು ಮತ್ತು ಕ್ಲೇಮುಗಳೂ ಇಲ್ಲ. ಸದರಿ ಸ್ವತ್ತಿನ ಮೇಲೆ ಸದರಿ ಮಾರಾಟಗಾರರು ಹೊಂದಿರುವ ಎಲ್ಲಾ ಹಕ್ಕುಗಳನ್ನು, ವಿಶೇಷ ಹಕ್ಕುಗಳನ್ನು, ಅನುಭೋಗದ ಹಕ್ಕುಗಳನ್ನು ಮತ್ತು ಉಪಹಕ್ಕುಗಳನ್ನು ಅಥವಾ ಯಾವುದೇ ರೀತಿಯಲ್ಲಿ ಅವರು ಹೊಂದಿರುವ ಒಡೆತನದ ಸವಲತ್ತುಗಳನ್ನು ಮತ್ತು ಸಂಪತ್ತು, ಅಧಿಕಾರ, ಹಕ್ಕುನಾಮೆ, ಹಿತಾಸಕ್ತಿ, ಕ್ಲೇಮು ಮತ್ತು ತಗಾದೆಯನ್ನು ಈ ಮೂಲಕ ಖರೀದಿದಾರರಿಗೆ ಸಂಪೂರ್ಣವಾಗಿ ವರ್ಗಾಯಿಸಿರುತ್ತಾರೆ ಮತ್ತು ಖರೀದಿದಾರರನ್ನು ಸ್ವತ್ತಿನ ವಾಸ್ತವಿಕ ಸ್ವಾಧೀನತೆಯಲ್ಲಿ ಇರಿಸಿದ್ದಾರೆ.

ಅಲ್ಲದೆ, ಷೆಡ್ಯೂಲ್ ಭೂಮಿಯನ್ನು ತಾವಾಗಲೀ ಅಥವಾ ತಮ್ಮ ಮೂಲಕ ಕ್ಲೇಮು ಮಾಡುವ ಯಾರೇ ಆಗಲಿ ಯಾರಿಗೂ ಯಾವುದೇ ರೀತಿಯಲ್ಲಿ ಪರಭಾರೆ ಮಾಡಿಲ್ಲವೆಂದು ಮತ್ತು ಸದರಿ ಭೂಮಿ ಎಲ್ಲಾ ಋಣಭಾರಗಳಿಂದ ಮುಕ್ತವಾದ ನಿರುಪಾದಿಕವಾದ ಸ್ವತ್ತಾಗಿದೆ ಎಂದು ಮಾರಾಟಗಾರರು ಖರೀದಿದಾರರಿಗೆ ಭರವಸೆ ನೀಡುತ್ತಾರೆ. ಹರಾಜು ನಿವೇಶನ ಕ್ರಯ ಪತ್ರವನ್ನು ______________________ ದಿನಾಂಕದಂದು ______________________ಪುಸ್ತಕದ ______________ ಸಂಪುಟದ _________________ ಪುಟಗಳಲ್ಲಿ_________________ ಸಂಖ್ಯೆಯಾಗಿ ನೋಂದಾಯಿಸಲಾಗಿದೆ.

## ಷೆಡ್ಯೂಲ್

___________________ಬಡಾವಣೆಯ____________________ವಿಭಾಗದಲ್ಲಿ__________________

ಸಂಖ್ಯೆಯ ನಿವೇಶನಕ್ಕೆ ಚಕ್ಕುಬಂದಿ :

| | | | |
|---|---|---|---|
| ಪೂರ್ವಕ್ಕೆ | : | ಪಶ್ಚಿಮಕ್ಕೆ | : |
| ಉತ್ತರಕ್ಕೆ | : | ದಕ್ಷಿಣಕ್ಕೆ | : |

ಈ ಮಧ್ಯೆ ಇರುವ ಪೂರ್ವ ಪಶ್ಚಿಮ :______________________________________ ಚ.ಅ./ಚ.ಮೀ ಉತ್ತರ ದಕ್ಷಿಣ:_________________ ಚ.ಅ./ಚ.ಮೀ.ಗಳು ಅಳತೆಯುಳ್ಳ ನಿವೇಶನವು ಈ ಕ್ರಯಕ್ಕೆ ಒಳಪಟ್ಟಿದೆ.

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಮೇಲೆ ತಿಳಿಸಿದ ದಿನಾಂಕ ತಿಂಗಳು ಮತ್ತು ವರ್ಷದಂದು ಬೆಂಗಳೂರಿನಲ್ಲಿ ತಮ್ಮ ಸಹಿ ಮತ್ತು ಮೊಹರು ಹಾಕಿರುತ್ತಾರೆ.

ಮಾರಾಟಗಾರ

ಸಾಕ್ಷಿಗಳು

1.

2.

ಉಪಕಾರ್ಯದರ್ಶಿ

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,**

ಬೆಂಗಳೂರು.